**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.47/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಶಿವನಗೌಡ ಗೌಡರ | ***P.W-1*** |
| ತಂದೆಯ ಹೆಸರು | : ಸೋಮನಗೌಡ | ***C.W-1*** |
| ವಯಸ್ಸು | : 76 ವರ್ಷ | |
| ಉದ್ಯೋಗ | : ಏನೂ ಇಲ್ಲ | |
| ವಾಸ | : ರಾಣೆಬೆನ್ನೂರು | |

**ದಿನಾಂಕಃ 24-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನಾಗರಾಜ ಎನ್ನುವವನು ನನಗೆ ಅಳಿಯ ಆಗಬೇಕು. ನ್ಯಾಯಾಲಯದ ಎದುರಿಗೆ ಮಂಗಳ ಬೀಜದ ಅಂಗಡಿ ಎಂದು ಇದೆ. ಅದು ನನ್ನ ಅಳಿಯನ ಹೆಸರಿನಲ್ಲಿದೆ. ದಿನಾಂಕ 08-10-2024 ರಂದು ಮಧ್ಯಾಹ್ನ 12 ಗಂಟೆಗೆ ಆರೋಪಿ 1 ಮತ್ತು 3 ಬಂದರು. ನನಗೆ ನಿನ್ನ ಅಳಿಯ ಎಲ್ಲಿದ್ದಾನೆ ಎಂದು ಕೇಳಿದರು. ಅದಕ್ಕೆ ನಾನು ಆತ ದಾವಣಗೆರೆಗೆ ಹೋಗಿದ್ದಾನೆ ಎಂದು ಹೇಳಿದೆ. ನಮಗೆ ನೀವು ಕಳ್ಳ ಬೀಜ ಮಾರಾಟ ಮಾಡುತ್ತೀರಿ ಎಂದರು. ಅದಕ್ಕೆ ನಾನು ಕಳ್ಳ ಬೀಜ ಮಾರಾಟ ಮಾಡುವುದಿಲ್ಲ ಅಂತ ಹೇಳಿದೆ. ಆಗ 1 ನೇ ಆರೋಪಿ ನನ್ನ ಕಪಾಳಕ್ಕೆ ಹೊಡೆದ. ನಂತರ ನಾನು ಹೊರಗೆ ಬಂದು ನನ್ನನ್ನು ಹೊಡೆಯಬೇಡಿ ಎಂದು ಹೇಳಿ ನಿಂತಿದ್ದೆ. ಆಗ ನನಗೆ ಗಟಾರದಲ್ಲಿ ಹಾಕಿ ತುಳಿಯುತ್ತೇನೆ ನನಗೆ ಸೂಳೆಮಗನೆ ಅಂತ ಅವಾಚ್ಯ ಶಬ್ದಗಳಿಂದ ಬೈದು ಜೀವಸಹಿತ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿರುತ್ತಾನೆ. ನಂತರ 3 ನೇ ಆರೋಪಿ ಮೋಟಾರ್ ಸೈಕಲ್ ತೆಗೆದುಕೊಂಡು ಬಂದು ಮೋಟಾರ್ ಸೈಕಲ್ ಮೇಲೆ ಹತ್ತಿಸಿಕೊಂಡು ಕುಬಾರ ಓಣಿಯ ರೈಲ್ವೆ ಗೇಟ್ ಬಳಿ ಕರೆದುಕೊಂಡು ಹೋದರು. ನನ್ನ ಮೈಕೈಗೆ ಕಾಲಿಗೆ ಕಾಲಿನಿಂದ ಮತ್ತು ಕೈಯಿಂದ ಹೊಡೆಬಡೆ ಮಾಡಿರುತ್ತಾರೆ. ಅಲ್ಲಿ ಜನ ಸೇರಿದ್ದರಿಂದ ನನ್ನನ್ನು ಬಿಟ್ಟರು. ನಂತರ ನಾನು ಆಟೋ ಮಾಡಿಕೊಂಡು ಮನೆಗೆ ಹೋಗಿರುತ್ತೇನೆ.

ನಂತರ ನನ್ನ ಅಳಿಯ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹಾವೇರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. 7 ದಿನಗಳಾದ ನಂತರ ಆಸ್ಪತ್ರೆಯಿಂದ ಬಂದು ದೂರನ್ನು ದಾಖಲಿಸಿರುತ್ತೇನೆ. ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ 2 ನೇ ದಿನಕ್ಕೆ ಪೊಲೀಸರು ಪಂಚನಾಮೆಗೆ ಅಂತ ಬಂದಿದ್ದರು. ಆ ಸಮಯದಲ್ಲಿ ಚಾಸಾ-2 ಮತ್ತು 3 ಇವರು ಹಾಜರಿದ್ದರು. ಅಲ್ಲಿ ಮಹಜರು ಮಾಡಿದರು. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಅಂಗಡಿ ಹತ್ತಿರ ಪಂಚನಾಮೆ ಆಗಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಒಂದು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಂತರ ಅಲ್ಲಿಂದ ನಮ್ಮನ್ನು ಕುಂಬಾರ ಓಣಿಯ ರೈಲ್ವೆ ಹಳಿ ಹತ್ತಿರ ಕರೆದುಕೊಂಡು ಹೋಗಿ ಮಹಜರು ಮಾಡಿರುತ್ತಾರೆ. ಆ ಸ್ಥಳದಲ್ಲಿ ಮಾಡಿದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಭಾವಚಿತ್ರವನ್ನು ನಿಪಿ-5 ಮತ್ತು 6 ಎಂದು ಗುರುತಿಲಾಯಿತು. ಆರೋಪಿ 1 ರಿಂದ 3 ಇವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನ್ನ ಅಳಿಯ ನಾಗರಾಜ ಬೀಜದ ಅಂಗಡಿ ವ್ಯಾಪಾರ ಮಾಡುತ್ತಾನೆ ಎಂದರೆ ನಿಜ. 1 ನೇ ಆರೋಪಿ ನನ್ನ ಅಳಿಯನ ಕಡೆಯಿಂದ 3 – 4 ಕ್ವಿಂಟಾಲ್ ಗೋವಿನಜೋಳ ಖರೀದಿ ಮಾಡಿಕೊಂಡು ಹೋಗಿದ್ದ ಎಂದರೆ ಸರಿ ಅಲ್ಲ. ಸದ್ರಿ ತೆಗೆದುಕೊಂಡ ಗೋವಿನಜೋಳ ಬಿತ್ತಿದ ನಂತರ ಮೊಳಕೆ ಒಡೆದಿರಲಿಲ್ಲ ಎಂದರೆ ಸರಿ ಅಲ್ಲ. ಸದ್ರಿ ಮೊಳಕೆ ಒಡೆಯದ ವಿಷಯಕ್ಕಾಗಿ 1 ನೇ ಆರೋಪಿ ನನ್ನ ಅಳಿಯನಿಗೆ ಬಂದು ಆದ ನಷ್ಟವನ್ನು ಭರಪಾಯಿ ಮಾಡಲು ಕೇಳಿದ್ದ ಎಂದರೆ ಸರಿ ಅಲ್ಲ. 3 – 4 ಬಾರಿ ನನ್ನ ಅಳಿಯನಿಗೆ ಹಣ ಕೇಳಿದ್ದ ಅದಕ್ಕೆ ಯಾವುದೇ ರೀತಿಯ ಬೆಲೆ ಕೊಟ್ಟಿರಲಿಲ್ಲ ಎಂದರೆ ಸರಿ ಅಲ್ಲ. ನನ್ನ ಅಳಿಯನ

ಮೇಲೆ ಆ ಕುರಿತು ದೂರು ದಾಖಲಿಸಿದ್ದ ಎಂದರೆ ಸರಿ ಅಲ್ಲ. ನಂತರ ನನ್ನ ಅಳಿಯ ಇಂದು ನಾಳೆ ಕೊಡುತ್ತೇನೆ ಎಂದು ಮುಂದೆ ಹಾಕುತ್ತ ಬಂದಿದ್ದ ಎಂದರೆ ಸರಿ ಅಲ್ಲ.

ನಾನು 7 ದಿನಗಳ ನಂತರ ದೂರನ್ನು ದಾಖಲಿಸಿರುತ್ತೇನೆ. ಆಸ್ಪತ್ರೆಗೆ ತೋರಿಸಿಕೊಳ್ಳುವ ಉದ್ದೇಶಕ್ಕಾಗಿ ಅದೇ ದಿನ ದೂರು ಕೊಡಲು ಸಾಧ್ಯವಾಗಲಿಲ್ಲ. ದೂರು ದಾಖಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಈ ದಿನ ನ್ಯಾಯಾಲಯಕ್ಕೆ ನನ್ನ ಅಳಿಯ ನನ್ನನ್ನು ಕರೆದುಕೊಂಡು ಬಂದಿರುತ್ತಾನೆ. ಆ ದಿನ ಬಹಳ ಜನ ಸೇರಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 1ನೇ ಆರೋಪಿ ನನ್ನನ್ನು ಹೊಡೆದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಅದೇ ರೀತಿ ನನ್ನದು ಮತ್ತು ನನ್ನ ಅಳಿಯನದು ಬಹಳ ಆಗಿದೆ ಎಂದು ಹೇಳಿದ ಎನ್ನುವ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿ ಅಲ್ಲ. ಘಟನೆಯಾದ ದಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಹಾವೇರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಘಟನಾ ಸ್ಥಳಕ್ಕೆ ಪೊಲೀಸರು ಬಂದು ಮಹಜರು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಂತರ ರೈಲ್ವೆ ಹಳಿಯ ಹತ್ತಿರ ಮತ್ತೊಂದು ಮಹಜರನ್ನು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ನನ್ನ ಅಳಿಯನ ವಿರುದ್ಧ 1ನೇ ಆರೋಪಿ ದೂರು ದಾಖಲಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಅದು ಸಿಸಿ ನಂಬ್ರ 1193/2025 ಎಂದು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಳಿಯನ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಅಳಿಯನ ಕಡೆ 1ನೇ ಆರೋಪಿ ಬೀಜ ಖರೀದಿ ಮಾಡಿಕೊಂಡಿದ್ದು ಅದು ಮೊಳಕೆ ಒಡೆಯದ ಕಾರಣ ಆತ ನನ್ನ ಅಳಿಯನ ವಿರುದ್ಧ ದೂರು ದಾಖಲಿಸಿದ್ದರಿಂದ ಅದನ್ನು ತಪ್ಪಿಸಿಕೊಳ್ಳುವ ಉದ್ದೆಶಕ್ಕಾಗಿ ನನ್ನ ಮೂಲಕ ನನ್ನ ಅಳಿಯ ಸುಳ್ಳು ದೂರು ದಾಖಲಿಸಿರುತ್ತಾನೆ ಎಂದರೆ ಸರಿ ಅಲ್ಲ. ನಾನು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.